**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಚನ್ನಗಿರಿ.**

**ಸಿ.ಸಿಃ 81/2025 DW-1**

| | |
|---|---|
| ಸಾಕ್ಷಿದಾರರ ಹೆಸರು | ಶ್ರೀನಿವಾಸ್ |
| ತಂದೆಯ ಹೆಸರು | ನರಸಿಂಹಲು |
| ವಯಸ್ಸು | 55 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ದೊಡ್ಡಘಟ್ಟ, ಹಾಲಿ ವಾಸಃ ದಾವಣಗೆರೆ |
| ದಿನಾಂಕ | 07.05.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು |

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರಿ ಎನ್ ಎಸ್ ವಕೀಲರಿಂದಃ**

ದಿನಾಂಕ 12.02.2025 ಮತ್ತು 18.02.2025 ರಂದು ನಾನು ಪಿರ್ಯಾದುದಾರರಿಗೆ ಹಣದ ಮರುಪಾವತಿಗಾಗಿ ಯಾವುದೇ ಚೆಕ್ಕುಗಳನ್ನು ಕೊಟ್ಟಿಲ್ಲ. ಅದೇ ರೀತಿ ನಾನು ಅವರಿಂದ ಯಾವುದೇ ಹಣವನ್ನು ಸಹ ಪಡೆದಿಲ್ಲ. 2016 ರಲ್ಲಿ ನನ್ನ ಅಕ್ಕ 2 ಎಕರೆ 05 ಗುಂಟೆ ಜಮೀನನ್ನು ಪಿರ್ಯಾದುದಾರರಿಗೆ ಖರೀದಿಗೆ ಕೊಟ್ಟಿದ್ದರು. ಆ ಖರೀದಿ ವ್ಯವಹಾರದ ಜವಾಬ್ದಾರಿಯನ್ನು ನಾನು ತೆಗೆದುಕೊಂಡಿದ್ದೆ. ಆ ಜಮೀನನ್ನು ಖರೀದಿಗೆ ಕೊಡುವಾಗ 13 ಗುಂಟೆ ವ್ಯತ್ಯಾಸ ಆಗಿತ್ತು. ಅದಕ್ಕೆ ಸಂಬಂಧಿಸಿದಂತೆ ಕರಾರು ಪತ್ರವನ್ನು ಸಹ ಮಾಡಿಕೊಟ್ಟಿದ್ದು ಅದನ್ನು ನಾನು ಈಗಾಗಲೇ ಸಿಸಿ ನಂ.75/2025 ರಲ್ಲಿ ನಿಡಿ.2 ರಂತೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. 13 ಗುಂಟೆ ಜಮೀನಿನಲ್ಲಿ ವ್ಯತ್ಯಾಸ ಬಂದಿದ್ದರಿಂದ ಪಿರ್ಯಾದುದಾರರು ಹದ್ದುಬಸ್ತು ಸರ್ವೆ ಆಗುವವರೆಗೆ ನನಗೆ ಭದ್ರತೆಗಾಗಿ ಚೆಕ್ಕು ಬೇಕು ಎಂದು ನನ್ನ ಅಕ್ಕನನ್ನು ಕೇಳಿದ್ದರು. ನನ್ನ ಅಕ್ಕನ ಬಳಿ ಚೆಕ್ ಇರಲಿಲ್ಲ ಹಾಗಾಗಿ ನಾನು ಪಿರ್ಯಾದುದಾರರಿಗೆ ಭದ್ರತೆಗೋಸ್ಕರ 2 ಖಾಲಿ ಚೆಕ್ಕುಗಳನ್ನು ಸಹಿ ಮಾಡಿ ಭದ್ರತೆಗಾಗಿ ಕೊಟ್ಟಿದ್ದೆ. ಹದ್ದುಬಸ್ತು ಸರ್ವೆ ಆದ ನಂತರ 13 ಗುಂಟೆ ಜಮೀನು ಕಡಿಮೆ ಆಗಲಿಲ್ಲ. ನಂತರ ಪಿರ್ಯಾದುದಾರರಿಗೆ ಖರೀದಿಯ ಪ್ರಕಾರ ಹಣ ಕೊಡುವಂತೆ ಕೇಳಿರುತ್ತೇವೆ. ಆದರೆ ಅವರು ಹಣವನ್ನು ಕೊಡಲಿಲ್ಲ. ಇವತ್ತು ಕೊಡುತ್ತೇನೆ, ನಾಳೆ ಕೊಡುತ್ತೇನೆ ಎಂದು ಮುಂದೂಡುತ್ತಾ ಬಂದಿರುತ್ತಾರೆ. 2019 ರಲ್ಲಿ ನನ್ನ ಅಕ್ಕ ಮರಣ ಹೊಂದಿರುತ್ತಾರೆ. ನಂತರ ನನ್ನ ಅಕ್ಕನ ಮಗ ನನಗೆ ಹಣ ಕೊಡಿಸುವಂತೆ ಕೇಳಿದ್ದರಿಂದ ನಾನು ಪಿರ್ಯಾದುದಾರರಿಗೆ ಪುನಃ ಹಣ ಕೊಡುವಂತೆ ಕೇಳಿರುತ್ತೇನೆ. ಆದರೆ ಅವರು ಹಣ ಕೊಟ್ಟಿರುವುದಿಲ್ಲ. ಪಿರ್ಯಾದುದಾರರು ಸದರಿ ಹಣವನ್ನು ಕೊಡದೇ ನಾನು ಭದ್ರತೆಗಾಗಿ ಕೊಟ್ಟಿದ್ದ ಚೆಕ್ಕುಗಳನ್ನು ದುರುಪಯೋಗ ಮಾಡಿಕೊಂಡು ನನ್ನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ. ದಿನಾಂಕ 10.03.2016 ರಲ್ಲಿ ಆದ ಖರೀದಿ ಪತ್ರವನ್ನು ನಾನು ಈಗಾಗಲೇ ನ್ಯಾಯಾಲಯಕ್ಕೆ ಸಿಸಿ ನಂ.75/2025 ರಲ್ಲಿ ನಿಡಿ.1 ರಂತೆ ಹಾಜರುಪಡಿಸಿದ್ದೇನೆ. ನಾನು ನಿಡಿ.1 ರಲ್ಲಿ ಸಾಕ್ಷಿದಾರ ಎಂದು ಸಹಿ ಮಾಡಿರುತ್ತೇನೆ. ನಾನು ಪಿರ್ಯಾದುದಾರರಿಗೆ ಯಾವುದೇ ಹಣ ಕೊಡುವುದು ಇರುವುದಿಲ್ಲ. ಪಿರ್ಯಾದುದಾರರು ನನ್ನ ಚೆಕ್ಕುಗಳನ್ನು ದುರುಪಯೋಗ ಮಾಡಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಆದ್ದರಿಂದ ದೂರನ್ನು ವಜಾ ಮಾಡಿ ನನ್ನನ್ನು ಬಿಡುಗಡೆ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ** ಪಿರ್ಯಾದು ಪರ ವಕೀಲರಿಂದಃ

( ಪಿರ್ಯಾದು ಪರ ವಕೀಲರ ವಿನಂತಿಯ ಮೇರೆಗೆ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಚನ್ನಗಿರಿ.**